# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.959/2017/ಉನಿವಿ-2

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 16.3.2019.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: (1) ಸಹಾಯಕ ಕಾರ್ಯಪಾಲಕ ಅಭಿಯಂತರರು, (2) ಸಹಾಯಕ ಅಭಿಯಂತರರು, (3) ಶ್ರೀ.ಇ.ವಿ.ವೆಂಕಟೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, (4) ಶ್ರೀ ರವಿ ಅಸೂತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, (5) ರಾಮು.ವಿ. ಸಹಾಯಕ ಕಾರ್ಯಪಾಲಕ ಅಭಿಯಂತರರು, (6) ಕೆ.ಎನ್.ವೆಂಕಟೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ,(7) ಕೆ.ಸ್ಮಿತಾ, ಸಹಾಯಕ ಇಂಜಿನಿಯರ್ (8) ಸೈಯದ್ ಫರಾನ, ಸಹಾಯಕ ಇಂಜಿನಿಯರ್, (9) ಬಿ.ನವೀನ್, ಸಹಾಯಕ ಇಂಜಿನಿಯರ್,(10) ಜಿ.ಎಂ.ನೇತ್ರೇಶ್ವರಿ, ಸಹಾಯಕ ಇಂಜಿನಿಯರ್, (11) ಶ್ರೀ ಗಂಗಾಧರ್, ಸಹಾಯಕ ಇಂಜಿನಿಯರ್ ಮತ್ತು (12)ಶ್ರೀ ಬಿ.ನಟರಾಜು, ಕಾರ್ಯಪಾಲಕ ಅಭಿಯಂತರರು, 220 ಕೆವಿ ವಿದ್ಯುತ್ ಸ್ವೀಕರಣಾ ವಿಭಾಗ, ಅಂಚೆಪಾಳ್ಯ, ಕುಣಿಗಲ್ ತಾಲ್ಲೂಕು, ಇವರ ವಿರುದ್ಧ ಕ್ರಮಕೈಗೊಳ್ಳುವ ಬಗ್ಗೆ.

*******

ಶ್ರೀ ದೊಡ್ಡರಂಗೇಡ, ಸೀಗೇಹಳ್ಳಿ, ಕುಣಿಗಲ್ ತಾ. ಎಂಬ ಹೆಸರಿಂದ ಬಂದ ದಿನಾಂಕವಿಲ್ಲದ ಅನಾಮಧೇಯ ದೂರನ್ನು ಮಾನ್ಯ ಉಪಲೋಕಾಯುಕ್ತರವರ ಆದೇಶದನ್ವಯ ಸ್ವಯಂ-ಪ್ರೇರಿತ ದೂರನ್ನಾಗಿ ದಾಖಲಿಸಲಾಗಿದೆ. ದೂರಿನಲ್ಲಿ, ಕುಣಿಗಲ್ ತಾಲ್ಲೂಕು ಅಂಚೆಪಾಳ್ಯ 220 ಕೆ.ವಿ. ವಿದ್ಯುತ್ ಸ್ಥಾವರದಲ್ಲಿ ಪಾಳಿ ಕೆಲಸ ನಿರ್ವಹಿಸಲು 1 ಪಾಳಿಗೆ ಒಬ್ಬ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ಸಹಾಯಕ ಅಭಿಯಂತರು, ಮತ್ತು ಸ್ಥಾವರ ಪರಿಚಾರಕ ದರ್ಜೆಯಂತೆ ಒಟ್ಟು 3 ಪಾಳಿ ನಿರ್ವಹಿಸಲು ಮಾನವ ಸಂಪನ್ಮೂಲ ಇರುತ್ತದೆ. ಆದರೆ ಇವರೆಲ್ಲರೂ 8 ಗಂಟೆ ಕೆಲಸ ನಿರ್ವಹಿಸುವ ಬದಲು 24ರಿಂದ 48, 72 ಗಂಟೆ ಕೆಲಸ ನಿರ್ವಹಿಸಿ 4 ರಿಂದ 12 ದಿನಗಳ ಕಾಲ ಕೆಲಸಕ್ಕೆ ಹಾಜರಾಗದೆ, ವೇತನ ಬಿಲ್ಲನ್ನು ಅವರೇ ಬರೆದು ಸಂಬಳ ಪಡೆಯುತ್ತಿದ್ದಾರೆ. ಆದರೆ ವೇತನ ಬಿಲ್ಲಿನಲ್ಲಿ ಪ್ರತಿನಿತ್ಯ ಕೆಲಸ ನಿರ್ವಹಿಸಿದಂತೆ ತೋರಿಸುತ್ತಾರೆ. ಆದರೆ ಇನ್ನು ಕೆಲವರು ಕೆಲಸಕ್ಕೆ ಬಾರದೆ ವೇತನ ಪಡೆಯುತ್ತಿದ್ದಾರೆ. ಈ ರೀತಿ ಪಾಳಿ ಕೆಲಸ ನಿರ್ವಹಿಸಿದ ಸಹಾಯಕ ಸಿಬ್ಬಂದಿಗಳು ಸಹ 2-3 ದಿನ ಕೆಲಸ ಮಾಡಿದರೆ 8 ದಿನ ಕೆಲಸಕ್ಕೆ ಬರುವುದಿಲ್ಲ. ಆದಾಗ್ಯೂ ಇವರೆಲ್ಲವರ ವೇತನವನ್ನು ಸಹಾಯಕ ಅಭಿಯಂತರಾದ ಶ್ರೀ ಬಿ.ನವೀನ್ ಅವರು

ಮಂಜೂರು ಮಾಡುತ್ತಿದ್ದಾರೆ. ನಿಯಮದಂತೆ ಹೆಚ್ಚುವರಿ ಕರ್ತವ್ಯ ನಿರ್ವಹಿಸಿದರೆ ಇಮ್ಮಡಿ ಸಂಬಳವಿದ್ದು, ಆದರೆ ಕೆಲಸ ನಿರ್ವಹಿಸದೆ ಕೆಲ ಸಿಬ್ಬಂದಿಗಳು ಇಮ್ಮಡಿ ಸಂಬಳ ಪಡೆಯುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲು ಕೋರಿರುತ್ತಾರೆ.

2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರುಗಳು ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಬರದೆ ತಮ್ಮ ಕರ್ತವ್ಯವನ್ನು ಇನ್ನೊಬ್ಬರಿಗೆ ಮುಖಾಮುಖಿಯಾಗಿ ನಿರ್ವಹಿಸದೆ ಕೇವಲ ಪುಸ್ತಕದಲ್ಲಿ ಚಾರ್ಜ್ ಹ್ಯಾಂಡೋವರ್‌ನ್ನು ಬರೆದಿಟ್ಟು ಹೋಗುತ್ತಾರೆ. ಆದ್ದರಿಂದ ಈ ಎಲ್ಲಾ ಅಕ್ರಮವನ್ನು ತನಿಖೆ ಮಾಡಿ ತಪ್ಪಿತಸ್ಥರ ಹಾಗೂ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ.

3. ಸದರಿ ಪ್ರಕರಣದಲ್ಲಿ ತನಿಖೆ ಮಾಡಿ ವರದಿ ಸಲ್ಲಿಸಲು ತುಮಕೂರು ಲೋಕಾಯುಕ್ತ ಎಸ್.ಪಿ. ಅವರಿಗೆ ದಿ.3.7.2017ರಂದು ಸೂಚಿಸಲಾಗಿತ್ತು. ಅದರಂತೆ ದಿ.17.5.2018ರಂದು ತುಮಕೂರು ಲೋಕಾಯುಕ್ತ ಎಸ್.ಪಿ. ಅವರು ತಮ್ಮ ವರದಿಯನ್ನು ಸಲ್ಲಿಸಿ ಸದರಿ ವರದಿಯಲ್ಲಿ ದೂರಿನಲ್ಲಿ ಆಪಾದಿಸಿದಂತೆ ಕುಣಿಗಲ್ ತಾಲ್ಲೂಕಿನ ಅಂಚೆ ಪಾಳ್ಯದಲ್ಲಿರುವ ಕೆಪಿಟಿಸಿಎಲ್ 220/66 ಕೆ.ವಿ. ವಿದ್ಯುತ್ ಸ್ಥಾವರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ದಿನನಿತ್ಯ ಪಾಳಿ ಪ್ರಕಾರ ಕರ್ತವ್ಯ ನಿರ್ವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. 3ರಿಂದ 12ನೇ ಎದುರುದಾರರು ಕರ್ತವ್ಯಲೋಪವೆಸಗಿದ್ದಾರೆಂದು ತಿಳಿಸಿರುತ್ತಾರೆ.

4. ತನಿಖಾಧಿಕಾರಿಗಳ ವರದಿಯ ಜೊತೆಗೆ (1) ದಿ.25.1.2014ರಂದು ಅಧೀಕ್ಷಕ ಇಂಜಿನಿಯರ್ ರವರು ಕಾರ್ಯನಿರ್ವಾಹಕ ಇಂಜಿನಿಯರ್ ಅವರಿಗೆ ಬರೆದ ಪತ್ರದ ಪ್ರತಿ, (2) ವಿದ್ಯುತ್ ಸ್ಥಾವರದಲ್ಲಿ ಅಧಿಕಾರಿಗಳಿಗೆ ನಿಗದಿಪಡಿಸಿದ ಪಾಳಿ ಚಾರ್ಟ್, (3) ಶಿಫ್ಟ್ ಚಾರ್ಟ್ ಮತ್ತು ಲಾಗ್ ಬುಕ್ ಪ್ರತಿ-ದಿ.1.1.2017ರಿಂದ 6.12.2017ರವರೆಗೆ (4) ದಿನನಿತ್ಯ ಪ್ರಭಾರ ವಹಿಸುವ ಮತ್ತು ತೆಗೆದುಕೊಳ್ಳುವ ವಹಿಯ ಪ್ರತಿಯನ್ನು (5)ದಿ.1.1.2017ರಿಂದ 6.12.2017ರವರೆಗೆ 3ರಿಂದ 11ನೇ ಎದುರುದಾರರು ಪ್ರತಿ ತಿಂಗಳು ಎಷ್ಟು ದಿನ ಕೆಲಸ ನಿರ್ವಹಿಸಿದರ ಬಗ್ಗೆ ಮಾಹಿತಿ, ಹಾಗೂ 3ರಿಂದ 11ನೇ ಎದುರುದಾರರ ಸಂಬಳದ ವಿವರ ಹಾಜರುಪಡಿಸಿರುತ್ತಾರೆ.

5. ತನಿಖಾಧಿಕಾರಿಯವರ ವರದಿಯ ಆಧಾರದ ಮೇಲೆ ಎದುರುದಾರರ ನಂ.3ರಿಂದ 12ರವರನ್ನು ಪಾರ್ಟಿಯಾಗಿ ಮಾಡಿ, ತನಿಖಾಧಿಕಾರಿಯವರ ವರದಿ ಮತ್ತು ದೂರಿನ ಪ್ರತಿಯನ್ನು 3ರಿಂದ 12ನೇ ಎದುರುದಾರಿಗೆ ಕಳುಹಿಸಿ ಅವರಿಂದ ಆಕ್ಷೇಪಣೆ ಕೋರಲಾಗಿ, ದಿ.29.6.2018ರಂದು 3ರಿಂದ 12ನೇ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

6. 3ರಿಂದ 12ನೇ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ದೂರಿನ ಆಪಾದನೆಗಳನ್ನು ಅಲ್ಲಗಳೆದು ಕುಣಿಗಲ್ ತಾಲ್ಲೂಕು ಅಂಚೆಪಾಳ್ಯದಲ್ಲಿರುವ ಕೆಪಿಟಿಸಿಎಲ್ 220/66 ಕೆ.ವಿ. ವಿದ್ಯುತ್ ಕೇಂದ್ರವು 2000ರಲ್ಲಿ ಕಾರ್ಯಾರಂಭ ಮಾಡಿದ್ದು, ಸದರಿ ಸ್ಥಾವರದಲ್ಲಿ

ಪ್ರಾರಂಭವಾದಾಗಿನಿಂದ 4 ಜನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, 4ಜನ ಸಹಾಯಕ ಇಂಜಿನಿಯರ್, ಮತ್ತು 8 ಜನ ಸಹಾಯಕರು ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರತಿಯೊಂದು ಪಾಳಿಗೆ ಒಬ್ಬ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಒಬ್ಬರು ಸಹಾಯಕ ಇಂಜಿನಿಯರ್ ಮತ್ತು ಇಬ್ಬರು ಸಹಾಯಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಿಯಮದಂತೆ 8 ಗಂಟೆ ಕಾಲದ 3 ಪಾಳಿಯಲ್ಲಿ ಕರ್ತವ್ಯನಿರ್ವಹಿಸಬೇಕಾಗುತ್ತದೆ. ಆದರೆ ಪಾಳಿಯ ಸಮಯವು ಇಂದಿನ ಪರಿಸ್ಥಿತಿಗೆ ಅನಾನುಕೂಲವಾಗಿರುವುದರಿಂದ ಸದರಿ ಸ್ಥಾವರದಲ್ಲಿ ಒಬ್ಬ ನೌಕರ 24 ಗಂಟೆಗಳ ಕರ್ತವ್ಯ ಮಾಡಬೇಕಾದ ಅನಿವಾರ್ಯತೆ ಉಂಟಾಗಿದೆಯೆಂದು ತಿಳಿಸಿರುತ್ತಾರೆ. ಕಾರಣ ದೂರಿನಲ್ಲಿ ಮತ್ತು ತನಿಖಾ ವರದಿಯಲ್ಲಿ ಮಾಡಿದ ಆಪಾದನೆ ಸತ್ಯಕ್ಕೆ ದೂರವಾಗಿದ್ದು, ತಮ್ಮನ್ನು ಪ್ರಕರಣದಿಂದ ಕೈಬಿಡಬೇಕೆಂದು ಕೋರಿರುತ್ತಾರೆ.

7. ದೂರು, ಆಕ್ಷೇಪಣೆ, ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, 3ರಿಂದ 11ನೇ ಎದುರುದಾರರು ಕುಣಿಗಲ್ ತಾಲ್ಲೂಕು ಅಂಚೆಪಾಳ್ಯದಲ್ಲಿರುವ ಕೆಪಿಟಿಸಿಎಲ್ 220/66 ಕೆ.ವಿ. ವಿದ್ಯುತ್ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ಒಪ್ಪಿಕೊಂಡಿರುತ್ತಾರೆ. ಮುಂದುವರೆದು, ಸ್ಥಾವರದಲ್ಲಿ ನಿಯಮದಂತೆ 8 ಗಂಟೆ ಕಾಲದ 3 ಪಾಳಿಯಲ್ಲಿ ಕರ್ತವ್ಯನಿರ್ವಹಿಸಬೇಕಾಗುತ್ತದೆ. 1 ಪಾಳಿಯಲ್ಲಿ ಒಬ್ಬ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಒಬ್ಬ ಸಹಾಯಕ ಇಂಜಿನಿಯರ್, ಮತ್ತು ಇಬ್ಬರು ಸಹಾಯಕರು ಕರ್ತವ್ಯ ನಿರ್ವಹಿಸಬೇಕೆಂದು ಒಪ್ಪಿರುತ್ತಾರೆ.

8. K.E.B. Definition of jobs(duties) 1975-Executive ಕಾಯ್ದೆಯಲ್ಲಿ 9(iii)(b) & Rule 13(ii)(b) ರಲ್ಲಿ ಜೂನಿಯರ್ ಮತ್ತು ಸಹಾಯಕ ಇಂಜಿನಿಯರ್ ಶಿಫ್ಟ್ ಪ್ರಕಾರ ಕರ್ತವ್ಯ ನಿರ್ವಹಿಸಬೇಕೆಂದು ಈ ಕೆಳಗಿನಂತೆ ಸೂಚಿಸುತ್ತದೆ.

> b) Shift duties: Attend shift duties(in rotation) take hourly readings of the feeders, switches, Bank, Transformer temperature, recording Battery voltage and specific gravity, record and maintain log sheet and log books, operate switchers, OCBs, etc., issue and receive line clears, ....
>
> KEB workload Norms Act, 1975 page 16 Table-3 states work load norms for stations as follows:
>
> "The station will work in 3 shifts viz., 7 hours to 15 hours, 15 HRs to 23 HRs and 23 HRs to 7 HRs and there shall be one supervisor for each shift in the station. "

9. ಮೇಲ್ಕಂಡ ವಿದ್ಯುತ್ ಇಲಾಖೆಯ ಕಾನೂನು ಪ್ರಕಾರ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ಅಧಿಕಾರಿಗಳು 3 ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ.

10. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಅಂಚೆಪಾಳ್ಯ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ 3ರಿಂದ 11ನೇ ಎದುರುದಾರರು ಪ್ರತಿ ತಿಂಗಳು ದಿನನಿತ್ಯ ಪಾಳಿಯ ಪ್ರಕಾರ 8 ಗಂಟೆ ಕೆಲಸ ನಿರ್ವಹಿಸಬೇಕೆಂದು, 12ನೇ ಎದುರುದಾರರು ಪಾಳಿ ಚಾರ್ಟನ್ನು ತಯಾರಿಸಿರುತ್ತಾರೆ. ತನಿಖಾಧಿಕಾರಿಗಳು ಜನವರಿ 2017ರಿಂದರಿಂದ ಡಿಸೆಂಬರ್ 2017ರವರೆಗಿನ ಪಾಳಿ ಚಾರ್ಟಿನ ಪ್ರತಿಗಳನ್ನು ಹಾಜರುಮಾಡಿರುತ್ತಾರೆ. ಅದನ್ನು ಅನುಬಂಧ-3 ಎಂದು ಗುರುತಿಸಿರುತ್ತಾರೆ. ಸದರಿ ಪಾಳಿಚಾರ್ಟನ್ನು ಪರಿಶೀಲಿಸಿದಾಗ ದಿನಕ್ಕೆ 3 ಪಾಳಿಗಳನ್ನು ತಯಾರಿಸಿದ್ದು, ಸದರಿ ಪಾಳಿಯಲ್ಲಿ ಒಬ್ಬ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಸಹಾಯಕ ಇಂಜಿನಿಯರ್ ಎಂದು ತೋರಿಸಿರುತ್ತಾರೆ.

11. ಎದುರುದಾರರು ಅಂಚೆಪಾಳ್ಯದಲ್ಲಿರುವ 225/66 ಕೆವಿ ವಿದ್ಯುತ್ ಸ್ವೀಕರಣ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸಿದ ಬಗ್ಗೆ ಹಾಜರಿ ಪುಸ್ತಕ ಇಟ್ಟಿರುವುದಿಲ್ಲ. 3ರಿಂದ 11ನೇ ಎದುರುದಾರರು ತಾವು ಕರ್ತವ್ಯ ನಿರ್ವಹಿಸಿದ ಬಗ್ಗೆ ಲಾಗ್ ಬುಕ್ ನಲ್ಲಿ ಸಹಿ ಮಾಡಿರುತ್ತಾರೆ.

12. ತನಿಖಾಧಿಕಾರಿಗಳು ಅಂಚೆಪಾಳ್ಯ ವಿಧ್ಯುತ್ ಸ್ವೀಕರಣಾ ಕೇಂದ್ರದ ದಿ.1.1.2017ರಿಂದ 6.12.2017ರವರೆಗಿನ ಲಾಗ್ ಪುಸ್ತಕದ ಪ್ರತಿಯನ್ನು ಮತ್ತು ಶಿಫ್ಟ್ ಚಾರ್ಟಿನ ಪ್ರತಿಯನ್ನು ಹಾಜರುಮಾಡಿರುತ್ತಾರೆ. ಪಾಳಿ ಚಾರ್ಟ್ ಹಾಗೂ ಲಾಗ್ ಬುಕ್ ತುಲನೆ ಮಾಡಿ ಪರಿಶೀಲನೆ ಮಾಡಿದಾಗ 3ರಿಂದ 11ನೇ ಎದುರುದಾರರು ಈ ಕೆಳಕಂಡಂತೆ ಪ್ರತಿತಿಂಗಳು ಕೆಲಸ ಮಾಡಿದ್ದು ಕಂಡುಬರುತ್ತದೆ.

JANUARY 2017

| no | Resp-Name | Dates on which worked in the month of January as per log book | Total days worked | No.of days to be worked as per the Shift Chart | No.of days les worked as per the Shift Chart |
|---|---|---|---|---|---|
| 1 | Venkatesh E V, AEE | 3,7,11,15,19,23,27 | 7 | 23 days and 4 weekly half-days | 16 days and 4 weekly half-days |
| 2 | Ravi Asoothi,AEE | 10,18,22,30, | 4 | 24 days and 3 weekly half-days | 20 days and 3 weekly half-days |
| 3 | Sri Ram V,AEE | 4,8,10,12,16,17,20,24,28. | 9 | 23 days and 4 weekly half-days | 14 days and 4 weekly half-days |
| 4 | Venkatesh K N,AEE | 1,5,9,13,21,25,29. | 7 | 23 days and 4 weekly half-days | 16 days and 4 weekly half-days |
| 5 | Smitha K, AE | 2,4,5,10,12,13,20,21,22,24, 25, | 11 | 23 days and 4 weekly half-days | 12 days and 4 weekly half-days |
| 6 | Syed Ferhana,AE | 15,16. | 2 | 23 days and 4 weekly half-days | 21 days and 4 weekly half-days |
| 7 | Nethreshwari G M,AE | 6,8,9,16,18,26,28,29,30, | 9 | 23 days and 4 weekly half-days | 14 days and 4 weekly half-days |
| 8 | Gangadhar,AE | 12,24. | 2 | 24 days and 3 weekly half-days | 22 days and 3 weekly half-days |
| ***Log book does not contain details of the charges taken/handed over on 14th and 31st January 2017.** | | | | | |

## FEBRUARY,2017

| no | Resp-Name | Dates on which worked as per log book | Total days worked | No.of days to l worked as per the Shift Chart | No.of days less worked as per the Shift Chart |
|---|---|---|---|---|---|
| 1 | Venkatesh E V, AEE | 4,8,12,16,20,24, | 6 | 21 days and 3 weekly half-days | 15 days and 3 weekly half-days |
| 2 | Ravi Asoothi,AEE | 3,7,11,15,19,23,27, | 7 | 21 days and 4 weekly half-days | 14 days and 4 weekly half-days |
| 3 | Ramu V,AEE | 1,5,9,13,21,26, | 6 | 21 days and 3 weekly half-days | 15 days and 3 weekly half-days |
| 4 | Venkatesh K N,AEE | 2,6,10,14,18,22,25, | 7 | 21 days and 3 weekly half-days | 14 days and 3weekly half-days |
| 5 | Smitha K, AE | 1,2,3,5,6,15,17,21,23, | 9 | 21 days and 3 weekly half-days | 12 days and 3 weekly half-days |
| 6 | Syed Ferhana,AE | 11,26,27, | 3 | 21 days and 3 weekly half-days | 18 days and 3 weekly half-days |
| 7 | Nethreshwari G M,AE | 7,9,11,13,21,27, | 6 | 21 days and 3 weekly half-days | 15 days and 3 weekly half-days |
| 8 | Gangadhar,AE | 19,24, | 2 | 21 days and 4 weekly half-days | 19 days and 4 weekly half-da |

***Log book does not contain details of the charges taken/handed over on 28th February 2017.**

## MARCH, 2017

| no | Resp-Name | Dates on which worked as per log book | Total days worked | No.of days to be worked as per the Shift Chart | No.of days less worked as per the Shift Chart |
|---|---|---|---|---|---|
| 1 | Venkatesh E V, AEE | 4,8,14,16,20,24,28. | 7 | 23 days and 4 weekly half-days | 16 days and 4 weekly half-days |
| 2 | Ravi Asoothi,AEE | 7,11,15,19,23,27. | 6 | 23 days and 4 weekly half-days | 17 days and 4 weekly half-days |
| 3 | Ramu V,AEE | 1,9,12,17,21,25,29. | 7 | 23 days and 4 weekly half-days | 16 days and 4 weekly half-days |
| 4 | Venkatesh K N,AEE | 2,6,10,13,18,22,26,30. | 8 | 24 days and 4 weekly half-days | 16 days and 4 weekly half-days |
| 5 | Smitha K, AE | 5,7,9,11,12,19,21,22,23. | 9 | 23 days and 4 weekly half-days - | 14 days and 4 weekly half-days |
| 6 | Syed Ferhana,AE | 1,3,12,14,29,30,42. | 7 | 24 days and 4 weekly half-days | 17 days and 4 weekly half-days |
| 7 | Nethreshwari G M,AE | 15,25,27 | 3 | 23 days and 4 weekly half-days | 20 days and 4 weekly half-days |
| 8 | Gangadhar,AE | 8,21,24,28 | 4 | 23 days and 4 weekly half-day | 19 days and 4 weekly half da |

ARRIL,2017

| no | Resp-Name | Dates on which worked as per log book | Total days worked | No.of days to b worked as per the Shift Chart | No.of days less worked as per the Shift Chart |
|---|---|---|---|---|---|
| 1 | Venkatesh E V, AEE | 1,5,10,17,21,25,29 | 7 | 23 days and 3 weekly half days | 16 days and 3 weekly half days |
| 2 | Ravi Asoothi,AEE | 8,12,20, | 3 | 22 days and 4 weekly half days | 19 days and 4 weekly half days |
| 3 | Ramu V,AEE | 2,9,14,26, | 4 | 23 days and 4 weekly half days | 19 days and 4 weekly half days |
| 4 | Venkatesh K N,AEE | 3,7,13,15,19,23,27, | 7 | 22 days and 4 weekly half days | 15 days and 4 weekly half days |
| 5 | Smitha K, AE | 2,3,4,6,14,20,22,26,28,30 | 10 | 23 days and 4 weekly half days | 13 days and 4 weekly half days |
| 6 | Syed Ferhana,AE | 12,16, | 2 | 22 days and 4 weekly half days | 20 days and 4 weekly half days |
| 7 | Nethreshwari G M,AE | 8,12,16,18,24, | 5 | 23 days and 3 weekly half days | 18 days and 3 weekly half days |
| 8 | Gangadhar,AE | 1,6,10, | 3 | 22 days and 4 weekly half days | 19 days and 4 weekly half days |

MAY,2017

| no | Resp-Name | Dates on which worked as per log book | Total days worked | No.of days to worked as pe the Shift Cha | No.of days less worked as per the Shift Chart |
|---|---|---|---|---|---|
| 1 | Venkatesh E V, AEE | 3, 7, 11, 15, 23,27,29 | 7 | 23 days and 4 weekly half days | 16 days and 4 weekly half days |
| 2 | Ravi Asoothi,AEE | 2,10,26, | 3 | 24 days and 3 weekly half days | 21 days and 3 weekly half days |
| 3 | Ramu V,AEE | 4,8,12,16, 24,28 | 6 | 23 days and 4 weekly half days | 17 days and 4 weekly half days |
| 4 | Venkatesh K N,AEE | 1,5,9,13,17,19,21,25,31 | 9 | 23 days and 4 weekly half days | 14 days and 4 weekly half days |
| 5 | Smitha K, AE | 2,3,10,11,12,14, 24,25,26,27, | 10 | 23 days and 4 weekly half days | 13 days and 4 weekly half days |
| 6 | Syed Ferhana,AE | 16,18,30, | 3 | 23 days and 4 weekly half days | 20 days and 4 weekly half days |
| 8 | Nethreshwari G M,AE | 4,6,8,18,20,22,28,29,30 | 9 | 23 days and 4 weekly half days | 14 days and 4 weekly half days |
| 9 | Gangadhar,AE | 8,26,28 | 3 | 24 days and 3 weekly half days | 21 days and 3 weekly half days |

JUNE,2017

| no | **Resp-Name** | Dates on which worked as per log book | Total days worked | No.of days to be worked as per the Shift Chart | No.of days less worked as per the Shift Chart |
|---|---|---|---|---|---|
| 1 | Venkatesh E V, AEE | 4,8,12,16,24,28 | 6 | 22 days and 4 weekly half days | 16 days and 4 weekly half days |
| 2 | Ravi Asoothi,AEE | 3,7,11,15,19,23,27,28 | 8 | 22 days and 4 weekly half days | 14 days and 4 weekly half days |
| 3 | Ramu V,AEE | 1,6,9,17,21,25,29, | 7 | 23 days and 3 weekly half days | 16 days and 3 weekly half days |
| 4 | Venkatesh K N,AEE | 2,5,10,14,18,22,26,30 | 8 | 23 days and 3 weekly half days | 15 days and 3 weekly half days |
| 5 | Smitha K, AE | 1,7,13,29 | 4 | 23 days and 3 weekly half days | 19 days and 3 weekly half days |
| 6 | Syed Ferhana,AE | 19 | 1 | 23 days and 3 weekly half days | 22 days and 3 weekly half days |
| 7 | Nethreshwari G M,AE | 3,9,10,11,15,19,20,23,25,26, 27, | 11 | 22 days and 4 weekly half days | 11 days and 4 weekly half days |
| 8 | Gangadhar,AE | 9,17,26 | 3 | 22 days and 4 weekly half days | 19 days and 4 weekly half days |

JULY, 2017

| no | Resp-Name | Dates on which worked as per log book | Total days worked | No.of days to be worked as per the Shift Chart | No.of days less worked as per the Shift Chart |
|---|---|---|---|---|---|
| 1 | Venkatesh E V, AEE | 2,6,8,14,18,22,26,30 | 8 | 24 days | 16 days |
| 2 | Ravi Asoothi,AEE | 1,5,9,13,17,21,25,29 | 9 | 22 days | 13 days |
| 3 | Ramu V,AEE | 3,7,11,27,31 | 5 | 23 days | 18 days |
| 4 | Venkatesh K N,AEE | 4,10,12,16,20,24,28 | 7 | 23 days | 16 days |
| 5 | Smitha K, AE | 1,3, | 2 | 23 days | 21 days |
| 6 | Syed Ferhana,AE | 9,30 | 2 | 23 days | 21 days |
| 7 | Naveena B,AE | 7,15,19,21,31 | 5 | 23 days | 18 days |
| 8 | Nethreshwari G M,AE | 13,17,23,25, | 4 | 22 days | 18 days |
| 9 | Gangadhar,AE | 3,11,28 | 3 | 24 days | 21 days |

AUGUST,2017

| no | Resp-Name | Dates on which worked as per log book | Total days worked | No.of days to be worked as per the Shift Chart | No.of days less worked as per the Shift Chart |
|---|---|---|---|---|---|
| 1 | Venkatesh E V, AEE | 2,6,7,14,18,22,23,26,27, 30,31 | 11 | 23 days | 12 days |
| 2 | Ravi Asoothi,AEE | 1,4,5,8,9,12 ,13, 16,17, 20,21,24,25,28 | 14 | 23 days | 9 days |
| 3 | Ramu V,AEE | 3,4,11,12,15,16,20,24,27, 28,31 | 11 | 23 days | 12 days |
| 4 | Venkatesh K N,AEE | 1,2,3,5,6,9 ,13,15, 17, 18,21,22, 25,26,29,30, | 16 | 24 days | 8 days |
| 5 | Syed Ferhana,AE | 4,9, | 2 | 24 days | 22 days |
| 6 | Naveena B,AE | 3,7,8,12,15,16,20,23,24 | 9 | 23 days | 14 days |
| 7 | Nethreshwari G M,AE | 1,2,5,10,11,12,13,14,16, 17,18,21,22,25,29,30 | 16 | 23 days | 7 days |
| 8 | Gangadhar,AE | 10,11 ,14,16,27,30,31 | 7 | 23 days | 16 days |

SEPTEMBER,2017

| no | Resp-Name | Dates on which worked as per log book | Total days worked | No.of days to be worked as per the Shift Chart | No.of days less worked as per the Shift Chart |
|---|---|---|---|---|---|
| 1 | Venkatesh E V, AEE | 4,7,15,16,19,20,23,24,28, | 9 | 22 days | 13 days |
| 2 | Ravi Asoothi,AEE | 1,2,5,10,13,14,18,21,26,29 | 10 | 23 days | 13 days |
| 3 | Ramu V,AEE | 1,4,5,8,,9,12,16,17,20,24, 25,28,29, | 13 | 23 days | 10 days |
| 4 | Venkatesh K N,AEE | 2,3,6,7,10,11,14,15,18,19, 22,23,26,27,30. | 15 | 22 days | 7 days |
| 5 | Smitha K, AE | 11,25, | 2 | No work has been allotted | - |
| 6 | Syed Ferhana,AE | 18,19,29 | 3 | 22 days | 19 days |
| 7 | Naveena B,AE | 2,4,5,6,9,10,12,13,15,16,20, 21,24,28,29,30. | 16 | 23 days | 7 days |
| 8 | Nethreshwari G M,AE | 1,6,9,10,11,14,15,17,18, 19,21,22 | 12 | 23 days | 11 days |
| 9 | Gangadhar,AE | 3,12, | 2 | 22 days | 20 days |

OCTOBER, 2017

| no | Resp-Name | Dates on which worked as per log book | Total days worked | No.of days worked as p the Shift Ch | No.of days l worked as p the Shift Ch |
|---|---|---|---|---|---|
| 1 | Venkatesh E V, AEE | 1,2,5,9,10,13,15,17,18, 21,22,25,26,29,30. | 15 | 24 days and 3 weekly half days | 9 days and 3 weekly half days |
| 2 | Ravi Asoothi,AEE | 4,7,8,11,12,13,15,20,23, 24,27,29,31. | 13 | 23 days and 4 weekly half days | 10 days and 4 weekly half days |
| 3 | Ramu V,AEE | 3,6,7,10,11,14,18,19,23, 30,31. | 11 | 23 days and 4 weekly half days | 12 days and 4 weekly half days |
| 4 | Venkatesh K N,AEE | 1,5,6,8,9,12,13,16,17,20, 21,24,25,28. | 14 | 23 days and 4 weekly half days | 9 days and 4 weekly half days |
| 5 | Syed Ferhana,AE | 3. | 1 | 23 days and 4 weekly half days | 22 days and 4 weekly half days |
| 6 | Naveena B,AE | 3,14,19,23,30. | 5 | 23 days and 4 weekly half days | 18 days and 4 weekly half days |
| 7 | Nethreshwari G M,AE | 7,12,15,16,20,21,23,24,26, 27,28,31. | 12 | 23 days and 4 weekly half days | 11 days and 4 weekly half days |
| 8 | Gangadhar,AE | 7,9,10,29. | 4 | 24 days weekly ha | 20 days weekly half |

NOVEMBER,2017

| no | Resp-Name | Dates on which worked as per log book | Total days worked | No.of days to b[e] worked as per the Shift Chart | No.of days les[s] worked as pe[r] the Shift Char[t] |
|---|---|---|---|---|---|
| 1 | Venkatesh E V, AEE | 2,3,6,7,10,11,15,19,22, 23,26,28,30. | 13 | 22 days and 4 weekly half days | 9 days and 4 weekly half days |
| 2 | Ravi Asoothi,AEE | 4,8,9,13,17,20,21,24,28, 30. | 10 | 23 days and 3 weekly half days | 13 days and 3 weekly half days |
| 3 | Ramu V,AEE | 3,4,7,8,12,15,16,20,23,24, 27. | 11 | 22 days and 4 weekly half days | 11 days and 4 weekly half days |
| 4 | Venkatesh K N,AEE | 1,5,6,9,10,14,17,18,22, 25,26,29. | 12 | 23 days and 3 weekly half days | 11days and 3 weekly half days |
| 5 | Smitha K, AE | 10. | 1 | Not allotted. | |
| 6 | Syed Ferhana,AE | 5. | 1 | 23 days and 3 weekly half days | 22 days and 3 weekly half days |
| 7 | Naveena B,AE | 11,30. | 2 | 22 days and 4 weekly half days | 20 days and 4 weekly half days |
| 8 | Nethreshwari G M,AE | 1,2,4,24,25,26. | 6 | 24 days and weekly half d[ays] | 18 days an[d] weekly half d[ays] |
| 9 | Gangadhar,AE | - | - | 22 days and 4 Weekly half day[s] | 22 days and 4 Weekly half days |

DECEMBER,2017

| no | Resp-Name | Dates on which worked as per log book | Total days worked | No.of days to be worked as per the Shift Chart | No.of days less worked as per the Shift Chart |
|---|---|---|---|---|---|
| 1 | Venkatesh E V, AEE | 1,4,5, | 3 | 5 days | 2 days |
| 2 | Ravi Asoothi,AEE | 3,6, | 2 | 4 days and 1 weekly half day | 2 days and 1 Weekly half day |
| 3 | Ramu V,AEE | 2,5,6, | 3 | 5 days and 1 weekly half day | 2 days and 1 Weekly half day |
| 4 | Venkatesh K N,AEE | 4, | 1 | 4 days and 1 weekly half day | 3 days and 1 Weekly half day |
| 5 | Syed Ferhana,AE | 2, | 1 | 4 days and 1 weekly half day | 3 days and 1 Weekly half day |
| 6 | Naveena B,AE | - | - | 5 days and 1 Weekly half day | 5 days and 1 Weekly half day |
| 7 | Nethreshwari G M,AE | 4, | 1 | 4 days and 1 weekly half day | 3 days and 1 Weekly half day |
| 8 | Gangadhar,AE | - | - | 5 days | 5 days |
| ***Log Book details are provided only till 6.12.2017.** | | | | | |

13. ದಿ.1.1.2017ರಿಂದ 6.12.2017ರವರೆಗೆ 3ರಿಂದ 11ನೇ ಎದುರುದಾರರು ಪಾಳಿ ಚಾರ್ಟ್ ಪ್ರಕಾರ ಕರ್ತವ್ಯನಿರ್ವಹಿಸಿರುವುದಿಲ್ಲ.

14. ಲಾಗ್ ಪುಸ್ತಕದಲ್ಲಿ ದಿನಕ್ಕೆ 3 ಜನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಸಹಾಯಕ ಇಂಜಿನಿಯರ್ ಪಾಳಿ ಪ್ರಕಾರ ಕರ್ತವ್ಯ ನಿರ್ವಹಿಸಿದ್ದು ಕಂಡುಬರುವುದಿಲ್ಲ. 3ರಿಂದ 11ನೇ ಎದುರುದಾರರು ಕರ್ತವ್ಯ ನಿರ್ವಹಿಸಿದ ಬಗ್ಗೆ ಹಾಜರಾತಿ ಪುಸ್ತಕ ಇಲ್ಲದೇ ಇರುವುದರಿಂದ ಅಧಿಕಾರಿಗಳು ನಿಯಮದ ಪ್ರಕಾರ ಕರ್ತವ್ಯ ನಿರ್ವಹಿಸಿಲ್ಲವೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಕಾರಣ 3ರಿಂದ 11ನೇ ಎದುರುದಾರರು ಕುಣಿಗಲ್ ತಾಲ್ಲೂಕು ಅಂಚೆಪಾಳ್ಯ 220/66 ಕೆ.ವಿ. ವಿದ್ಯುತ್ ಸ್ಥಾವರದ ಸ್ವೀಕರಣ ಕೇಂದ್ರದಲ್ಲಿ 8 ಗಂಟೆ ನಿಯಮಾನುಸಾರ ಪಾಳಿ ಕರ್ತವ್ಯ ನಿರ್ವಹಿಸದೆ ತಮ್ಮ ಇಚ್ಛಾನುಸಾರ ಕರ್ತವ್ಯ ನಿರ್ವಹಿಸಿ, ಕರ್ತವ್ಯಲೋಪವೆಸಗಿದ್ದಾರೆಂದು ಕಂಡುಬರುತ್ತದೆ.

15. 12ನೇ ಎದುರುದಾರರು ಕಾರ್ಯಪಾಲಕ ಇಂಜಿನಿಯರ್ ಆಗಿದ್ದು, ತಮ್ಮ ಆಕ್ಷೇಪಣೆಯಲ್ಲಿ 220/66 ಕೆ.ವಿ.ಅಂಚೆಪಾಳ್ಯ ವಿದ್ಯುತ್ ಸ್ವೀಕರಣ ಕೇಂದ್ರದಲ್ಲಿ ದಿ.6.12.2016ರಂದು ಕೆಲಸಕ್ಕೆ ವರದಿ ಮಾಡಿಕೊಂಡಿದ್ದು, ಸದರಿಯವರು ಅಂಚೆಪಾಳ್ಯ ವಿಭಾಗದಲ್ಲಿ ಒಟ್ಟು 16 ಉಪಸ್ಥಾವರಗಳ ಮೇಲ್ವಿಚಾರಣಾ ಅಧಿಕಾರಿಯಾಗಿರುತ್ತಾರೆಂದು ತಿಳಿಸಿರುತ್ತಾರೆ. 12ನೇ ಎದುರುದಾರರು ಅಂಚೆಪಾಳ್ಯ ವಿದ್ಯುತ್ ಸ್ವೀಕರಣ ಕೇಂದ್ರದ ಉಸ್ತುವಾರಿ ಅಧಿಕಾರಿಯಾಗಿದ್ದು ಮತ್ತು 3ರಿಂದ 11ನೇ ಎದುರುದಾರರ ಉಸ್ತುವಾರಿ ಅಧಿಕಾರಿಯಾಗಿರುತ್ತಾರೆ. ಆದರೆ 3ರಿಂದ 11ನೇ ಎದುರುದಾರರು ಪಾಳಿ ಪ್ರಕಾರ ಕರ್ತವ್ಯ ನಿರ್ವಹಿಸದೇ ಇರುವುದಕ್ಕೆ ಅವರ ವಿರುದ್ಧ 12ನೇ ಎದುರುದಾರರು ಯಾವುದೇ ಕ್ರಮಕೈಗೊಳ್ಳದೇ ಕರ್ತವ್ಯಲೋಪವೆಸಗಿರುವುದು ಕಂಡುಬರುತ್ತದೆ.

16. ತನಿಖಾಧಿಕಾರಿಗಳು ಹಾಜರುಪಡಿಸಿದ ಅನುಬಂಧ-1 ರ ದಾಖಲೆಯ ಪ್ರಕಾರ 3ನೇ ಎದುರುದಾರರಾದ ಕೆ.ಎನ್.ವೆಂಕಟೇಶ್ ಅವರು ಅಂಚೆಪಾಳ್ಯ ವಿದ್ಯುತ್ ಸ್ವೀಕರಣ ಕೇಂದ್ರದಲ್ಲಿ ದಿ.24.7.2013ರಿಂದ, 4ನೇ ಎದುರುದಾರರಾದ ರವಿ ಅಸೋಟಿ ಅವರು ದಿ.1.9.2012ರಿಂದ, 5ನೇ ಎದುರುದಾರರಾದ ರಾಮು ವಿ. ಅವರು 9.10.2015ರಿಂದ, 6ನೇ ಎದುರುದಾರರಾದ ಕೆ.ಎನ್.ವೆಂಕಟೇಶ್ 10.11.2016ರಿಂದ, ಸ್ಮಿತಾ.ಕೆ. 9.12.2015ರಿಂದ, ಸೈಯದ್ ಫರಾನಾ 10.12.2015ರಿಂದ, 9ನೇ ಎದುರುದಾರರಾದ ನವೀನ್.ಬಿ. ದಿ.11.12.2015ರಿಂದ, 10ನೇ ಎದುರುದಾರರಾದ ನೇತ್ರೇಶ್ವರಿ 12.2.2016ರಿಂದ, 11ನೇ ಎದುರುದಾರರಾದ ಗಂಗಾಧರ್ ಅವರು ದಿ.24.8.2016ರಿಂದ ಮತ್ತು 12ನೇ ಎದುರುದಾರರಾದ ನಟರಾಜ್ ಬಿ. ಅವರು ದಿ.6.12.2016ರಿಂದ ಅಂಚೆಪಾಳ್ಯ ವಿದ್ಯುತ್ ಸ್ವೀಕರಣ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ದೂರನ್ನು ದಾಖಲಿಸುವಾಗ ದೂರುದಾರರು 1 ಮತ್ತು 2ನೇ ಎದುರುದಾರರ ಹುದ್ದೆಯ ಹೆಸರಿನಲ್ಲಿ ದೂರು ನೀಡಿದ್ದು, ಆದರೆ ಸದರಿ ಹುದ್ದೆಗಳಲ್ಲಿ 3ರಿಂದ 11ನೇ ಎದುರುದಾರರು ಈವರೆಗೂ ಕರ್ತವ್ಯ

ನಿರ್ವಹಿಸಿದ್ದು, ಸದರಿ ಅವಧಿಯಲ್ಲಿ ಎದುರುದಾರರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

17. ಆದ್ದರಿಂದ, 3 ರಿಂದ 12ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ರಿಂದ (iii)ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 3 ರಿಂದ 12ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ 12ನೇ ಎದುರುದಾರರು ಈಗಾಗಲೇ ನಿವೃತ್ತರಾಗಿದ್ದು, ಕೆ.ಸಿ.ಎಸ್.ಆರ್.ನಿಯಮ 214(2)(ಬಿ) ಅಡಿಯಲ್ಲಿ ಅನುಮತಿ ನೀಡಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಡಿಯಲ್ಲಿ 3 ರಿಂದ 12ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಉಪಲೋಕಾಯುಕ್ತರಿಗೆ ವಹಿಸಬೇಕೆಂದೂ ಕೋರಲಾಗಿದೆ.

18. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

N. Anand 16/3

(ನ್ಯಾಯಮೂರ್ತಿ ಎನ್.ಆನಂದ)
16/3/19 ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.